The Coronation Book.

ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.



First Edition 1,200 Copies.

As. 6 ps.] [ಕ್ರಯ ೨|| ಆಣೆ.

The Christian Literature Society,
MYSORE.

ಇಂಗ್ಲಾಂಡಿನ ಮಹಾರಾಜರಾದ ಏಳನೆಯ ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.

ಎಡ್ವರ್ಡ್ ಮಹಾರಾಜರಿಗೆ ೧೯೦೨ ನೇ ವರ್ಷದ ಜೂನ್ ತಿಂಗಳು ೨೬ ರಲ್ಲಿ ಕಿರೀಟಧಾರಣೆಯಾಗ ಬೇಕೆಂದು ಮೊದಲು ನೇಮಿಸಿತ್ತಷ್ಟೆ. ಅಷ್ಟರಲ್ಲಿ ಅವರಿಗೆ ಅಸ್ವಸ್ಥವಾಯಿತು. ಆದಕಾರಣ ಆಗಸ್ಟ್ ತಿಂಗಳು ೯ ನೇ ತಾರೀಕಿಲ್ಲಿ ಈ ಮಹೋತ್ಸವವು ನಡೆಯತಕ್ಕದ್ದೆಂದು ವಿಧಿಸಲ್ಪಟ್ಟಿತು. ಆ ದಿನವು ಹುಟ್ಟುವದಕ್ಕೆ ಮುಂಚೆಯೇ ರಾತ್ರಿಯೆಲ್ಲಾ ನೋಟಕರು ಬೀದಿಯಲ್ಲೇ ಕಾಲಹರಣಮಾಡುತ್ತಿದ್ದರು. ಮಹಾರಾಜರು ಬಕಿಂಗ್ಹಮ್ ಅರಮನೆಯಿಂದ ವೆಸ್ಟ್‌ಮಿನ್‌ಸ್ಟರ್ ಆಬಿಯೆಂಬ ದೇವಾಲಯಕ್ಕೆ ಮೆರವಣಿಗೆಯಾಗಿ ಹೊರಡುವ ಬೀದಿಯ ಇಕ್ಕಡೆಗಳಲ್ಲಿರುವ ಮನೆಗಳ ಕಿಟಿಕಿಗಳೂ ಮೇಲ್ಮಾಳಿಗೆಗಳೂ ನೋಟಕರಿಂದ ತುಂಬಿದ್ದವು. ಹಿಡಿದಿರುವ ಸ್ಥಳವನ್ನು ಬಿಟ್ಟುಹೋದರೆ ಪುನಃ ಆ ಸ್ಥಳವು ಸಿಕ್ಕಲಾರದೆಂಬ ಭಯದಿಂದ ಬೀದಿಯಲ್ಲಿ ನಿಂತಿದ್ದ ನೋಟಕರು ಐದಾರು ಗಂಟೆಗಳಕಾಲ ಅತ್ತಿತ್ತ ಕದಲದೆ ಇರ ಬೇಕಾಯಿತು. ಈ ಪ್ರಕಾರ ನಾನಾ ವಿಧವಾಗಿ ಕಷ್ಟಪಡುತ್ತಿದ್ದಾಗ್ಯೂ ಉತ್ಸವವನ್ನು ನೋಡಿ ಸಂತೋಷ ಪಡಬೇಕೆಂಬ ಆಶೆಯಿಂದ ಪ್ರಜೆಗಳು ಕಾದುಕೊಂಡಿರಲು ಹನ್ನೊಂದು ಗಂಟೆಗೆ ಕೆಲವು ನಿಮಿಷಗಳಿರುವಾಗ್ಯೆ ಹೈಡ್‌ಪಾರ್ಕೆಂಬ ವನದಲ್ಲಿ ಪಿರಂಗಿಯವರು ಗುಂಡು ಹಾರಿಸಿದರು. ಆಗ ಮಹಾರಾಜರು ಪತ್ನೀಸಮೇತರಾಗಿ ಬಕಿಂಗ್ಹಮ್ ಅರಮನೆಯಿಂದ ಪಟ್ಟದ ಗಾಡಿಯಲ್ಲಿ ಕುಳಿತು ಹೊರಟರೆಂದು ಎಲ್ಲರೂ ತಿಳುಕೊಂಡರು. ಭಂಗಾರದ ಹೊದಿಕೆಯಿಂದ ಥಳಥಳಿಸುತ್ತಿರುವ ಈ ಗಾಡಿಗೆ ಬಹು ಸುಂದರವಾದ ಎಂಟು



ಎಡ್ವರ್ಡರ ಮೈಗಾವಲಿಯ ಸಿಪಾಯಿ.

ರುವದು.

ಕುದುರೆಗಳನ್ನು ಕಟ್ಟಿತ್ತು. ಆದರ ಹಿಂದೆಯೂ ಮುಂದೆಯೂ ನಮ್ಮ ಹಿಂದೂ ದೇಶದಿಂದಲೂ, ಆಸ್ಟ್ರೇಲಿಯಾ, ಕ್ಯಾನಡಾ, ದಕ್ಷಿಣ ಆಫ್ರಿಕ ಮೊದಲಾದ ದೇಶಗಳಿಂದಲೂ ಕರೆಯಿಸಲ್ಪಟ್ಟಿದ್ದ ಸವಾರರು ಕ್ರಮಕ್ರಮವಾಗಿ ಮೈಗಾವಲಾಗಿ ಹೋದರು. ಇವರಲ್ಲದೆ ಇಂಗ್ಲಾಂಡಿನ ಪ್ರಭುಗಳೂ, ನಮ್ಮ ದೇಶದ ರಾಜರಲ್ಲನೇಕರೂ, ಬೇರೆ ಬೇರೆ ದೇಶಗಳ ಶ್ರೀಮಂತರೂ ಅಮೂಲ್ಯವಾದ ವಸ್ತ್ರಾಭರಣಗಳನ್ನಿಟ್ಟುಕೊಂಡು ಬಹು ಆಡಂಬರದಿಂದ ಕುದುರೆಗಳ ಮೇಲೂ ರಥಗಳಲ್ಲಿಯೂ ಕುಳಿತುಕೊಂಡು ಹೊರಟರು. ಇಷ್ಟು ವೈಭವದಿಂದ ಮೆರವಣಿಗೆಯಾಗಿ ಹೋಗುತ್ತಿರುವ ಎಡ್ವರ್ಡ್ ಸಾರ್ವಭೌಮರನ್ನೂ ಅವರ ರಾಣಿಯವರನ್ನೂ ದಾರಿಯ ಉದ್ದಕ್ಕೂ ನಿಂತಿರುವ ಪ್ರಜೆಗಳು ನೋಡಿ ನಾನಾ ಪ್ರಕಾರವಾಗಿ ತಮ್ಮ ಹರ್ಷವನ್ನು ಸೂಚಿಸಿದರು.




ಜಪಾನ್‌ಚಕ್ರಾಧಿಪತ್ಯದ ಪ್ರತಿನಿಧಿಗಳಾಗಿ ಬಂದ ಕೊಮಾತ್ಸು ರಾಜಕುಮಾರು.

ಸಾರ್ವಭೌಮರು ವೆಸ್ಟ್‌ಮಿನ್‌ಸ್ಟರ್ ಆಬಿ ದೇವಾಲಯವನ್ನು ಮುಟ್ಟಿದ ಕೂಡಲೆ ಅದನ್ನು ಸೂಚಿಸುವದಕ್ಕೋಸ್ಕರ ಫಿರಂಗಿ ಗುಂಡು ಹಾರಿಸಿದರು. ಆ ದೇವಾಲಯವು ಮಹಾಪುರಾತನವಾದದ್ದು. ಇಂಗ್ಲಾಂಡಿನ ಮಹಾರಾಜರುಗಳು ಅನೇಕ ಶತಮಾನಗಳಿಂದ ಕಿರೀಟಧಾರಣೆ ಮಾಡಿಸಿಕೊಳ್ಳುತ್ತ ಬರುತ್ತಿರುವದು ಆ ದೇವಾಲಯದಲ್ಲೇ. ಆದರೆ ಎಡ್ವರ್ಡ್ ಮಹಾರಾಜರವರ ಕಿರೀಟಧಾರಣೆಯಾದ ದಿವಸ ಆ ದೇವಾಲಯಕ್ಕಿದ್ದ ಸೊಬಗೂ ವೈಭವವೂ ಹಿಂದೆ ಯಾವ ಕಾಲದಲ್ಲೂ ಇರಲಿಲ್ಲವೆಂದು ಸುಲಭವಾಗಿ ಊಹಿಸ ಬಹುದು. ಅರವತ್ತು ಎಪ್ಪತ್ತು ವರ್ಷಗಳ ಹಿಂದೆ ವಿಕ್ಟೋರಿಯಾ ಮಹಾರಾಣಿಯವರಿಗೆ ಕಿರೀಟಧಾರಣೆಯಾದ ಕಾಲದಲ್ಲಿ ಇಂಗ್ಲಾಂಡ್ ರಾಜ್ಯದ ವಿಸ್ತೀರ್ಣವೂ ಐಶ್ವರ್ಯವೂ ಇದ್ದ ಸ್ಥಿತಿಯನ್ನು ಈ ಕಾಲದ ಅದರ ಸ್ಥಿತಿಗೆ ಹೋಲಿಸಿನೋಡುವಾಗ್ಯೆ ಅಜಗಜಾಂತರ ವ್ಯತ್ಯಾಸವಿರುವದು. ಮತ್ತು ಈ ಕಾಲದ ನಾಗರಿಕತೆಯನ್ನು ನೋಡುವಲ್ಲಿ ಇಂಗ್ಲಾಂಡಿನ ವೈಭವವನ್ನು ನೂರಷ್ಟು ಹೆಚ್ಚಾಗಿ ಪ್ರಕಾಶಿಸುವಂತೆ ಮಾಡುವದಾಗಿದೆ. ಹೀಗಿರುವದರಿಂದ ಭೂಲೋಕದ ಸಕಲ ಭಾಗಗಳಲ್ಲಿಯೂ ವ್ಯಾಪಿಸಿಕೊಂಡಿರುವ ಇಂಗ್ಲಾಂಡ್ ರಾಜ್ಯಕ್ಕೆ ಮಹಾರಾಜರಾಗತಕ್ಕವರು ಕಿರೀಟವನ್ನು ಧರಿಸಿಕೊಳ್ಳುವ ದೇವಾಲಯವು ಎಷ್ಟು ವೈಭವವುಳ್ಳದ್ದಾಗಿದ್ದಿರ ಬೇಕೋ ನೋಡಿ ತಿಳಿಯತಕ್ಕದ್ದೇ ಹೊರತು ವಿವರಿಸಿ ತಿಳಿಯುವದು ಸಾಧ್ಯವಲ್ಲ.

ಮಹಾರಾಜರೂ ಅವರ ಪತ್ನಿಯವರೂ ಬರುವದಕ್ಕೆ ಮುಂಚಿತವಾಗಿಯೇ ದೇವಾಲಯದಲ್ಲಿ ಇಂಗ್ಲಾಂಡಿನ ಪ್ರಮುಖರಾದ ಪ್ರಭುಗಳೂ ದೊಡ್ಡ ಮನುಷ್ಯರೂ ಅವರವರ ಘನತೆಗೆ ಯೋಗ್ಯವಾದ ಆಸನಗಳಲ್ಲಿ ಕುಳಿತಿದ್ದರು. ಅವರ ವಸ್ತ್ರಾಭರಣಗಳ ಕಾಂತಿಯೂ ದೇವಾಲಯದ ಶೃಂಗಾರವೂ ನೋಟ



ಕಿರೀಟಧಾರಣೆಯ ಉತ್ಸವದ ಮೆರವಣಿಗೆಯು ಕೆನೇಡಿಯನ್ ಆರ್ಚ್ ಎಂಬ ಕಮಾನಿನೊಳಗಿಂದ ನುಗ್ಗಿ ಬರುವದು.




ಅಭಿಷೇಕ ಕಾಲದಲ್ಲಿ ಮೇಲ್ಪಟವನ್ನು ಹಿಡಿಯತಕ್ಕವರಾದ ನಾಲ್ಕು ಮಂದಿ ಪ್ರಭುಗಳು ಮೊದಲಾದವರು.

ಕರ ಕಣ್ಮನಗಳನ್ನು ಆಕರ್ಷಿಸುತ್ತಿದ್ದವು. ಸಾರ್ವಭೌಮರು ಬರುವದಕ್ಕೆ ಮುಂಚೆ ಒಂದುವರೆ ಗಂಟೆ ಹೊತ್ತಿರುವಾಗಲೇ ಆ ದೇವಾಲಯದಲ್ಲಿ ಗಾನಮಾಡುವ ಹುಡುಗರೂ ತುತೂರಿಯವರೂ ಸೇರಿ ಅತ್ಯಂತ ಮನೋಹರವಾಗಿ ಒಂದು ಕೀರ್ತನೆಯನ್ನು ಹಾಡಿದರು. ಇವರಿರತಕ್ಕ ಸ್ಥಾನವು ನೋಟಕರ ಕಣ್ಣಿಗೆ ಮರೆಯಾಗಿದ್ದದರಿಂದ ಅವರ ಧ್ವನಿಯು ಯಾವದೋ ಒಂದು ಲೋಕದಿಂದ ಬರುವಂತಿತ್ತು. ಈ ಕೀರ್ತನೆಯನ್ನು ಹಾಡುತ್ತಿರುವಾಗ ದೇವಾಲಯದ ವಿವಿಧ ಅಧಿಕಾರಿಗಳಾದ ಪಾದ್ರಿಗಳು ತಮ್ಮ ಉದ್ಯೋಗಗಳನ್ನು ಸೂಚಿಸುವ ವಸ್ತ್ರಾಭರಣಗಳಿಂದ ಅಲಂಕೃತರಾಗಿ ಎಡ್ವರ್ಡ್ ದಿ ಕನ್‌ಫೆಸರ್ ಎಂಬ ದೊರೆಯ ಹೆಸರಿನಲ್ಲಿ ಕಟ್ಟಿರುವ ಗುಡಿಯೊಳಗಿನಿಂದ ಇಂಗ್ಲಾಂಡಿನ ಕಿರೀಟಾದಿ ರಾಜ ಚಿನ್ಹೆಗಳನ್ನು ತಂದು ಕಿರೀಟಧಾರಣೆಯಾಗತಕ್ಕ ಸ್ಥಾನಕ್ಕೆದುರಾಗಿರುವ ಎತ್ತರವಾದ ಪೀಠದ ಮೇಲಿಟ್ಟರು. ನೀಲವರ್ಣದ ಮೂರು ರೇಶಿಮೆ ದಿಂಬುಗಳ ಮೇಲೆ ಮೂರು ಕಿರೀಟಗಳು ಥಳಥಳಿಸುತ್ತಿದ್ದವು. ಮಧ್ಯದಲ್ಲಿದ್ದ ಕಿರೀಟದೊಳಗೆ ಒಂದು ಕೆಂಪುರತ್ನವು ಪ್ರಜ್ವಲಿಸುತ್ತಿತ್ತು. ಇದನ್ನು ಇಂಗ್ಲಾಂಡಿಗೆ ರಾಜನಾಗಿದ್ದ ೫ ನೇ ಹೆನ್ರಿಯೆಂಬವನು ೧೪೧೫ ರಲ್ಲಿ ಮಾಡಿದ ಅಜಿನ್ಕೋರ್ಟ್ ಎಂಬ ಯುದ್ಧದಲ್ಲಿ ತನ್ನ ಕಿರೀಟದಲ್ಲಿ ಧರಿಸಿದ್ದನು. ಈ ಮೂರು ಕಿರೀಟಗಳಲ್ಲಿ ಅಲೆಕ್ಸಾಂಡ್ರಾ ಮಹಾರಾಣಿಯವರಿಗಾಗಿ ಮಾಡಿದ್ದ ಕಿರೀಟದಲ್ಲಿ ಕೋಹಿನೂರ್ ಎಂಬ ಲೋಕಪ್ರಖ್ಯಾತವಾದ ವಜ್ರವು ಅತ್ಯಂತ ಶ್ರೇಷ್ಠವಾದದ್ದಾಗಿ ಹೊಳೆಯುತ್ತಲಿತ್ತು.




ಅಬಿಸಿನಿಯಾ ರಾಜಕುಮಾರರು.


ಕಿರೀಟಗಳ ಪಕ್ಕದಲ್ಲಿರಿಸಿದ್ದ ಇತರ ರಾಜಚಿನ್ಹೆಗಳು ಯಾವವೆಂದರೆ—ಇಂಗ್ಲಾಂಡಿನ ಮಹಾರಾಜರು ಆಳತಕ್ಕ ಭೂಭಾಗವನ್ನು ಸೂಚಿಸುವ ಭಂಗಾರದ ಗೋಳ. ಇದಲ್ಲದೆ ಅವರ ಅಧಿಕಾರವನ್ನು ಸೂಚಿಸತಕ್ಕ ವಜ್ರಖಚಿತವಾದ ದಂಡ, ಇದರ ತುದಿಯಲ್ಲಿ ವೈಢೂರ್ಯದ ಗುಂಡೂ ಅದರ ಮೇಲ್ಗಡೆ ಚಿನ್ನದಿಂದ ಮಾಡಿದ ಶಿಲುಬೆಯ ಆಕಾರವೂ ಇರುವವು. ರಾಜರ ಕೈಯಲ್ಲಿ ಹಿಡಿಯುವ ಈ ದಂಡಕ್ಕೆ ಸ್ವಲ್ಪ ವ್ಯತ್ಯಾಸವಾಗಿಯೂ ಮಹಾರಾಣಿಯವರು ಕೈಯಲ್ಲಿ ಹಿಡಿಯುವಂಥಾದ್ದಾಗಿಯೂ ಇರುವ ಮತ್ತೊಂದು ದಂಡವು ಇದರ ಪಕ್ಕದಲ್ಲಿಟ್ಟಿತ್ತು. ಈ ದಂಡಗಳೊಡನೆ ಮಹಾರಾಜರವರ ಪಾದಕ್ಕೆ ಕಟ್ಟುವ ಚಿನ್ನದ ಮಮ್ರೋಜು ಅಂದರೆ ಕುದುರೆಸವಾರರು ತೊಡುವ ಮುಳ್ಳು ಇತ್ತು. ಇದನ್ನು ಯಾರು ಕಟ್ಟಿಕೊಳ್ಳುವದಕ್ಕೆ ಯೋಗ್ಯರೋ ಅವರು ಸಕಲ ಘನತೆಗೆ ಆಧಾರರೆಂಬುದೇ ಇದರ ಸೂಚನೆ. ರಾಜಚಿನ್ಹೆಗಳಲ್ಲಿ ಕೆಂಪುರತ್ನವು ಕೆತ್ತಿದ ಒಂದು ಚಿನ್ನದ ಉಂಗರವೂ ಇದ್ದಿತು. ರಾಜನಿಗೂ ಪ್ರಜೆಗಳಿಗೂ ಇರುವ ಪರಸ್ಪರ ಅನ್ಯೋನ್ಯಭಾವಕ್ಕೆ ಈ ಉಂಗರವು ಗುರುತು. ಆ ಪೀಠದ ಮೇಲೆ ಮೂರು ಖಡ್ಗಗಳೂ ಇದ್ದವು. ಇವುಗಳಲ್ಲೊಂದರ ತುದಿ ಮೊಂಡಾಗಿರುವದು. ಇದು ಕನಿಕರವನ್ನು ಸೂಚಿಸುತ್ತದೆ. ಉಳಿದ ಎರಡು ಖಡ್ಗಗಳು ಐಹಿಕ ವಿಚಾರಗಳಲ್ಲಿಯೂ ಪಾರಮಾರ್ಥಿಕ ವಿಚಾರಗಳಲ್ಲಿ



ವೆಸ್ಟ್ ಮಿನಿಸ್ಟರ್ ಆಬಿ ಎಂಬ ದೇವಾಲಯದಲ್ಲಿರುವ ಕಿರೀಟಧಾರಣೆಯ ಪೀಠಗಳು.



ಯಾರ್ಕಿನ ಆರ್ಚಭಿಷಪ್ಪರು, (ಗುರುಗಳು).



ಕ್ಯಾಂಟರ್ಬರಿಯ ಆರ್ಚಭಿಷಪ್ಪರು, (ಗುರುಗಳು).



ಮಹಾರಾಣಿಯವರು ಪರಿವಾರ ಸಮೇತ ಹೋಗುವದು.

ರುಗಳಿರಾ, ಈ ರಾಜ್ಯಕೋಶಗಳಿಗೆಲ್ಲಾ ನಿಸ್ಸಂದೇಹವಾಗಿ ರಾಜರಾಗಿರುವ ಎಡ್ವರ್ಡ್ ಸಾರ್ವಭೌಮರನ್ನು ನಿಮಗೆ ತೋರಿಸುತ್ತೇನೆ ನೋಡಿ. ನಿಮ್ಮ ರಾಜಭಕ್ತಿಯನ್ನು ಪ್ರಕಟಿಸುವದಕ್ಕಾಗಿ ಇಲ್ಲಿಗೆ ಕೂಡಿ ಬಂದಿರತಕ್ಕ ನೀವೆಲ್ಲರೂ ಇವನನ್ನು ಮನಃಪೂರ್ವಕವಾಗಿ ನಿಮ್ಮ ರಾಜನೆಂದು ಅಂಗೀಕರಿಸುವದಕ್ಕೆ ಒಪ್ಪುತ್ತೀರಾ? ಎಂದು ಎಲ್ಲರಿಗೂ ಕೇಳಿಸುವ ಹಾಗೆ ಗಟ್ಟಿಯಾಗಿ ಹೇಳಲು ದೇವಾಲಯಕ್ಕಾಚೆ ಇರುವವರೂ ಚನ್ನಾಗಿ ಕೇಳುವಂತೆ ಸಕಲ ಸಭೆಯವರು—ಎಡ್ವರ್ಡ್ ಮಹಾರಾಜರನ್ನು ಭಗವಂತನು ಸಂರಕ್ಷಿಸಲಿ; ಅವರೂ ಮಹಾರಾಣಿಯವರೂ ಚಿರಕಾಲ ಬಾಳಲಿ ಎಂದು ಆರ್ಭಟಿಸಿದರು ಕೂಡಲೆ ಹನ್ನೆರಡು ಮಂದಿ ತುತೂರಿಯವರು ಈ ವಾರ್ತೆಯನ್ನು ಸಕಲ ದಿಕ್ಕುಗಳ ನಿವಾಸಿಗಳಿಗೆ ತಿಳಿಯಪಡಿಸುವರೋ ಎಂಬ ಹಾಗೆ ಬಹು ಗಟ್ಟಿಯಾಗಿ ಧ್ವನಿಮಾಡಿದರು.



ತುರ್ಕಿ ಸುಲ್ತಾನರ ಪ್ರತಿನಿಧಿಯವರು.

ಅನಂತರ ಸಾರ್ವಭೌಮರಿಗೆ ಕಿರೀಟಧಾರಣೆಯ ಸಂಸ್ಕಾರವು ಪ್ರಾರಂಭವಾಯಿತು. ಪ್ರಧಾನಗುರುಗಳು ಮೊದಲು ಪ್ರಭುವಿನ ರಾತ್ರೀ ಭೋಜನವೆಂಬ ಮತಸಂಸ್ಕಾರವನ್ನು ನೆರವೇರಿಸುವದಕ್ಕೆ ತೊಡಗಿ ಸ್ವಲ್ಪ ಭಾಗವನ್ನು ಮುಗಿಸಿ ಮಹಾರಾಜರವರಿಂದ ಭಾಷೆಯನ್ನು ಮಾಡಿಸಿದರು. ಅದು ಹ್ಯಾಗಂದರೆ—

ಗುರು: ಈ ಗ್ರೇಟ್ ಬ್ರಿಟನ್ ರಾಜ್ಯದಲ್ಲಿಯೂ ಇದಕ್ಕೆ ಸೇರಿದ ಸಮಸ್ತ ದಿಗ್ದೇಶಗಳಲ್ಲಿಯೂ ವಾಸಿಸತಕ್ಕ ನಿವಾಸಿಗಳನ್ನು ಪಾರ್ಲಿಮೆಂಟ್ ಸಭೆಯಲ್ಲಿ ಒಪ್ಪಿ ಸ್ಥಾಪನೆ ಮಾಡಿರುವ ರಾಜಶಾಸನಗಳ ಪ್ರಕಾರವಾಗಿ ಆ ಸಭೆಯ ಕಟ್ಟಳೆಗಳು ಪದ್ಧತಿಗಳು ಮೊದಲಾದವುಗಳನ್ನನುಸರಿಸಿ ಆಳುವದಾಗಿ ಭಗವಂತನ ಸನ್ನಿಧಾನದಲ್ಲಿ ಭಾಷೆಯನ್ನು ಕೊಟ್ಟು ಪ್ರಮಾಣ ಮಾಡುತ್ತೀರಾ?

ರಾಜ: ಹಾಗೆಯೇ ಭಾಷೆಯನ್ನು ಕೊಟ್ಟು ಪ್ರಮಾಣ ಮಾಡುತ್ತೇನೆ.

ಗುರು: ನೀವು ನ್ಯಾಯವಿಚಾರಣೆಮಾಡಿ ಕೊಡತಕ್ಕ ತೀರ್ಪುಗಳಲ್ಲೆಲ್ಲಾ ದೇಶದ ಕಟ್ಟಳೆಗೆ ಲೋಪಬಾರದಂತೆ ನಿಮ್ಮ ಶಕ್ತ್ಯನುಸಾರ ಕನಿಕರದಿಂದ ಕೂಡಿದ ನೀತಿಯನ್ನು ನಡೆಸುವಿರಾ?

ರಾಜ: ಹಾಗೆಯೇ ನಡಸುತ್ತೇನೆ.

ಗುರು: ದೇವಭಕ್ತಿಗೆ ಸಂಬಂಧಪಟ್ಟ ಧರ್ಮಗಳನ್ನು ನಡಸುವದರಲ್ಲಿಯೂ, ಇಂಗ್ಲಾಂಡ್ ದೇಶದಲ್ಲಿ ರಾಜಶಾಸನವಾಗಿ ಸ್ಥಾಪಿಸಲ್ಪಟ್ಟಿರುವ ಪ್ರೊಟೆಸ್ಟಾಂಟ್ ಕ್ರೈಸ್ತ ಮತಪದ್ಧತಿಗಳನ್ನೇ ಆಚರಿಸುವದರಲ್ಲಿಯೂ, ಚರ್ಚ್ ಆವ್ ಇಂಗ್ಲಾಂಡೆಂಬ ಕ್ರೈಸ್ತಮತಶಾಖೆಯ ಬೋಧನೆಯು ಆರಾಧನಾಕ್ರಮ, ಆಳಿಕೆ ಮೊದಲಾದವುಗಳನ್ನು ಪೂರ್ವದ ರೀಯಾಯಿತಿ ಪ್ರಕಾರವೇ ನಡಸುತ್ತಾ ಬರುವಿರಾ?

ರಾಜ: ಇದೆಲ್ಲವನ್ನೂ ನಡಸುವದಾಗಿ ವಾಗ್ದಾನಮಾಡುತ್ತೇನೆ.



ಹಿಂದುಸ್ಥಾನದ ಸಿಪಾಯಿಗಳ ಸಂಗಡ ಸಂಭಾಷಣೆ ಬೆಳಸುವದು."



ಸಾರ್ವಭೌಮರ ರಾಜಚಿನ್ಹೆಗಳನ್ನು ತಕ್ಕೊಂಡು ಹೋಗುವ ಪ್ರಭುಗಳು.

ತರುವಾಯ ಮಹಾರಾಜರು ಎದ್ದು ಆರಾಧನಾಪೀಠದ ಮುಂದುಗಡೆಗೆ ಹೋಗಿ, ಪ್ರಧಾನಗುರುಗಳು ಅವರ ಕೈಗೆ ಕೊಟ್ಟ ವೇದಪುಸ್ತಕವನ್ನು ಮುಟ್ಟಿ, "ನಾನೀಗ ವಾಗ್ದಾನ ಮಾಡಿರುವ ಕಾರ್ಯಗಳನ್ನು ನಡಸುತ್ತೇನೆ" ಎಂದು ಹೇಳಿ ಪ್ರಮಾಣಮಾಡಿದರು. ಆ ಮೇಲೆ ಈ ಪ್ರಮಾಣವನ್ನು ಬರೆದಿರುವ ಚರ್ಮದ ಕಾಗದಕ್ಕೆ ರುಜುವನ್ನು ಹಾಕಿದರು.

ಅನಂತರ ನಾಲ್ಕುಮಂದಿ ಪ್ರಭುಗಳು ಮೇಲ್ಪಟವನ್ನು ಹಿಡಿದಿರಲು ಪ್ರಧಾನಗುರುಗಳು ಮೊಣಕಾಲಿನ ಮೇಲೆ ನಿಂತಿದ್ದ ಮಹಾರಾಜರವರ ಎದೆಗೂ ತಲೆಗೂ ಅಂಗೈಗೂ ತೈಲವನ್ನು ಹಚ್ಚಿ ಅಭಿಷೇಕ ಮಾಡಿದರು. ಆ ಮೇಲೆ ಮಹಾರಾಜರವರು ಎದ್ದು ನಿಂತುಕೊಳ್ಳಲು ಪಾದ್ರಿಗಳು ಚಿನ್ನದ ಎಳೆಗಳಿಂದಲೇ ನೇದಿದ್ದ ಅಂಗಿಯನ್ನು ಅವರಿಗೆ ತೊಡಿಸಿದರು. ಇದರ ಮೇಲ್ಗಡೆ ಸಾರ್ವಭೌಮರ ಅಧಿಕಾರಕ್ಕೆ ಗುರುತಾದ ಚಿತ್ರವಿಚಿತ್ರವಾದ ಸರಿಗೆ ಕೆಲಸದಿಂದ ಶೋಭಿಸುತ್ತಿದ್ದ ನಿಲುವಂಗಿಯನ್ನು ತೊಡಿಸುವದಕ್ಕೆ ಮುಂಚಿತವಾಗಿ ಅವರ ಹಿಮ್ಮಡಿಗಳಿಗೆ ಚಿನ್ನದ ಮುಳ್ಳೋಜನ್ನು ಮುಟ್ಟಿಸಿ, ಅವರ ನಡುವಿಗೆ ನೀತಿಯ ಖಡ್ಗವನ್ನು ಕಟ್ಟಿದರು. ಈ ಖಡ್ಗವನ್ನು ಮಹಾರಾಜರು ಕಳಚಿ ಭಗವಂತನ ಸೇವೆಗೇ ಅದನ್ನು ಒಪ್ಪಿಸುವೆನೆಂಬುದಕ್ಕೆ ಗುರುತಾಗಿ ಅದನ್ನು ಆರಾಧನಾಪೀಠದ ಮುಂದೆ ಸಮರ್ಪಿಸುವದಕ್ಕೆ ಹೋಗಲು, ದೇವಾಲಯದ ಅಧಿಕಾರಿಗಳು ಅದನ್ನು ತಮ್ಮ ಬಳಿಯಲ್ಲೇ ಇಟ್ಟುಕೊಳ್ಳುವದು ಅಸಾಧ್ಯವಾದ ಕಾರಣ ಮಹಾರಾಜರ ಪ್ರಭುಗಳಲ್ಲೊಬ್ಬರು ದೇವಾಲಯಕ್ಕೆ ಹಣವನ್ನು ಕಟ್ಟಿ ಆ ಖಡ್ಗವನ್ನು ಕೊಂಡುಕೊಂಡು, ಒರೆಯಿಂದ ಕಿತ್ತು ಮಹಾರಾಜರ ಮುಂದೆ ಹಿಡಿದು ನಡೆಯುತ್ತಿದ್ದರು. ತರುವಾಯ ಅವರ ಕೈಯಲ್ಲಿ ರಾಜದಂಡಗಳನ್ನು ಇರಿಸುವದು ಮೊದಲಾದ ಆಚಾರಗಳೆಲ್ಲಾ ನಡೆದವು. ಕಡೆಯಲ್ಲಿ ಸಾರ್ವಭೌಮರು ಸಕಲಭೂಷಣ ಭೂಷಿತರಾಗಿ ಕಿರೀಟಧಾರಣೆಯ ಕುರ್ಚಿಯ ಮೇಲೆ ಕುಳಿತುಕೊಂಡಿರಲು, ಆರಾಧನಾಪೀಠದ ಮೇಲಿಟ್ಟಿದ್ದ ಅವರ ಕಿರೀಟವನ್ನು ದೇವಾಲಯದ ಅಧಿಕಾರಿಗಳು ತೆಗೆದು ಪ್ರಧಾನಗುರುಗಳ ಕೈಗೆ ಕೊಡಲು ಅವರು ಅದನ್ನು ತಕ್ಕೊಂಡು ಸಾರ್ವಭೌಮರ ತಲೆಯ ಮೇಲಿಟ್ಟರು. ಆ ಕ್ಷಣವೇ ದೇವಾಲಯದಲ್ಲಿದ್ದವರೆಲ್ಲರೂ ಒಂದೇ ಧ್ವನಿಯಿಂದ „ಭಗವಂತನು ರಾಜರನ್ನು ಸಂರಕ್ಷಿಸಲಿ!" ಎಂದು ಆರ್ಭಟಿಸಿದರು. ತುತೂರಿಗಳು ಧ್ವನಿಗೈದವು. ಹೈಡ್‌ಪಾರ್ಕಿನಲ್ಲಿ ಫಿರಂಗಿಗಳು ಈ ಸುದ್ದಿಯನ್ನು ಬಹುದೂರದವರೆಗೂ ಕೇಳಿಸಮಾಡಿದವು. ದೇವಾಲಯದ ಸ್ತಂಭಗಳಿಗೆ ಕಟ್ಟಿದ್ದ ವಿದ್ಯುಚ್ಛಕ್ತಿಯ ದೀಪಗಳು ಅಕಸ್ಮತ್ತಾಗಿ ಮಿಣುಗುಟ್ಟಿದವು. ಪ್ರಭುಗಳು ತಮ್ಮ ತಮ್ಮ ಮಕುಟಗಳನ್ನು ತಲೆಯಲ್ಲಿಟ್ಟುಕೊಳ್ಳಲು ಅವುಗಳ ಸಾವಿರಾರು ರತ್ನಗಳು ತಾರಾವಳಿಗಳಂತೆ ಥಳಥಳಿಸಿದವು. ಆ ಮೇಲೆ ಪ್ರಧಾನಗುರುಗಳು ಮಹಾರಾಜರ ಕೈಯಲ್ಲಿ ವೇದಪುಸ್ತಕವನ್ನು ಬಹುಮಾನವಾಗಿ ಕೊಟ್ಟು ಆಶೀರ್ವಾದ ಮಾಡಿದರು. ಅನಂತರ ಸಾರ್ವಭೌಮರು ಕಿರೀಟವೇ ಮುಂತಾದ ಸಕಲ ರಾಜಲಕ್ಷಣಗಳಿಂದ ತಮ್ಮ ಸ್ಥಾನವನ್ನು ಬಿಟ್ಟೆದ್ದು ಸಿಂಹಾಸನವನ್ನು ಹತ್ತಿ ಕುಳಿತುಕೊಂಡರು. ಆಗ ಮೊದಲು ಪ್ರಧಾನಗುರುಗಳು ಸಾರ್ವಭೌಮರ ಮುಂದೆ ಮೊಣಕಾಲೂರಿ ನಿಂತು ತಮ್ಮ ರಾಜಭಕ್ತಿಯನ್ನು